




## ರಕ್ತದಾನದ ಮಾಹಿತಿ

ಜೂನ್ 14ರ 'ಸುಧಾ' ಮುಖಪುಟ ಲೇಖನ ಡಾ.ಎಸ್.ವಿನಯಾ ಅವರ 'ಜೀವ ಉಳಿಸುವ ರಕ್ತದಾನ' ಮಾಹಿತಿ ಪೂರ್ಣವಾಗಿತ್ತು.

-ಪಿ.ಗೋವಿಂದರಾಜ್, ಶಿವಮೊಗ್ಗ/
ಪುಷ್ಪಾ ಶ್ರೀರಾಮರಾಜು, ಬೆಂಗಳೂರು/
ಪಿ.ಎಸ್.ನಾರಾಯಣ ಭಟ್ ಕೊಯಿಲ, ಪುತ್ತೂರು

## ವಾಯಿದೆ ನಂತರ ಹೇಗೆ?

ಸಂಗ್ರಹಿತ ರಕ್ತವು ವಾಯಿದೆಯೊಳಗೆ (ಎಕ್ಸ್‌ಪೈರಿ ಡೇಟ್) ಮುಗಿಯದಿದ್ದರೆ ಏನು ಮಾಡುತ್ತಾರೆಂದು ತಿಳಿಯಲಿಲ್ಲ. -ನೇ.ಗೋ.ಭ., ಕುಕ್ಕೆ ಸುಬ್ರಮಣ್ಯ

*ಸಂಗ್ರಹಿತ ರಕ್ತವು ವಾಯಿದೆ (35 ದಿನಗಳು) ಗಿಂತ ಹೆಚ್ಚು ದಿನ ಉಳಿಯುವುದಿಲ್ಲ. ಅಷ್ಟೊಂದು ಬೇಡಿಕೆ ಇದೆ. ಒಂದು ವೇಳೆ ಉಳಿದರೆ ಆ ರಕ್ತವನ್ನು ಎಸೆಯಲಾಗುತ್ತದೆ. (-ಸಂ)*

## ಮಾತು ಬಲ್ಲ ಸ್ವಾರಸ್ಯ

ಪದ್ಮಾ ಕೃಷ್ಣಮೂರ್ತಿಯವರ 'ಮಾತು ಬಲ್ಲವನಿಗೆ' ಬರಹ ಸ್ವಾರಸ್ಯ ಮತ್ತು ಅರ್ಥಪೂರ್ಣವಾಗಿದೆ. -ರಾಮಣ್ಣ, ತುಮಕೂರು/ ನಾರಾಯಣ ಯಾಜಿ, ಶಿರಾಲಿ

## ಮತ್ತೆ ಮತ್ತೆ ಚಾಂಪಿಯನ್

ವಿಶ್ವನಾಥ ಆನಂದ್ ಅವರು 'ಮತ್ತೆ ವಿಶ್ವ ಚಾಂಪಿಯನ್' ಆದದ್ದರ ಬಗ್ಗೆ ಕೆ.ಓಂಕಾರ ಮೂರ್ತಿ ಸೊಗಸಾಗಿ ಬರೆದಿದ್ದಾರೆ.

-ಬಸನಗೌಡ ಕಲ್ಲೇದ, ತಿರ್ಲಾಪುರ/ ಕಾಳೀಹುಂಡಿ ಶಿವಕುಮಾರ್, ಮೈಸೂರು/
ಎಚ್.ಆನಂದಕುಮಾರ್, ಚಿತ್ರದುರ್ಗ/
ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

## ಬೀಚಿ ನೆನಪು

ಬಿ.ಎಸ್.ಕೇಶವ ರಾವ್ ಬೀಚಿ ಬದುಕಿದ್ದರೆ ನೂರು ವರ್ಷ ಆಗುತ್ತಿತ್ತು ಎಂಬ ನೆಪ ಸೃಷ್ಟಿಸಿಕೊಂಡು ಬರೆದದ್ದು ಸೂಕ್ತವಾಗಿತ್ತು. ಮಡದಿ ಸೀತಮ್ಮ ಅಂದು ಅನಕೃ ಅವರ 'ಸಂಧ್ಯಾರಾಗ' ಕಾದಂಬರಿಯನ್ನು ಬೀಚಿಯವರ ಕೈಗೆ ಕೊಡದಿದ್ದರೆ ಇಂದು ಕನ್ನಡಕ್ಕೆ ನಿರ್ಭೀತ, ವಿನೋದ ಸಾಹಿತಿ ಸಿಗುತ್ತಿರಲಿಲ್ಲವೇನೋ!

- ಪಿ.ಎನ್.ಶ್ರೀವತ್ಸ, ಬೆಂಗಳೂರು/ ಅಮೃತೇಶ್ ತಂಡರ, ಅಣ್ಣಿಗೇರಿ

## ಮುತ್ತು ಕೊಟ್ಟರೆ ಮಗುವೆ?

'ಸುಧಾ' ನೀವು ಕೇಳಿದಿರಿ?ಯಲ್ಲಿ ಒಮ್ಮೆ ಬೀಚಿ ಉತ್ತರಿಸಿದ್ದು ಹೀಗೆ:

ಪ್ರಶ್ನೆ: ಮುತ್ತು ಕೊಟ್ಟರೆ ಮಗುವಾಗುವಂತಿದ್ದರೆ?
ಉತ್ತರ: ಥೂ ಸೋಂಭೇರಿ! - ಎಸ್.ಕೆ.ಗೀತಾ, ಹಾಸನ

## ಮನೋಜ್ಞ ಕಥೆ

ಪಾಪಪ್ರಜ್ಞೆಯ ಸುತ್ತ ಗಿರಕಿ ಹೊಡೆಯುವ ಕಮಲಾ ನರಸಿಂಹರವರ 'ಏನು ಮಾಡಿದರೇನು? ಭಾವ ಹಿಂಗದು' ಕಥೆ ಮನೋಜ್ಞವಾಗಿದೆ. 'ಭವ ಹಿಂಗದು..' ಎಂಬ ದಾಸರ ಪದದ ಸಾಲನ್ನು 'ಭಾವ ಹಿಂಗದು..' ಎಂದು ಕಥೆಗೆ ಅರ್ಥಪೂರ್ಣವಾಗಿ ಬದಲಿಸಿಕೊಂಡಿರುವುದು ಸರಿಯಾಗೇ ಇದೆ.

-ನ.ಅ.ರಾವ್, ಬೆಂಗಳೂರು/ ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಎಸ್.ನಿತ್ಯ,
ಮೂಡಬಿದರೆ/ ಕೊಹಿಮ, ಬಸರಕೋಡು

## ಅಂಬಿ ಸಂಭ್ರಮ ಸಾಕೆ?

ಚಿತ್ರನಟ ಅಂಬರೀಷ್ ಅವರ ಹುಟ್ಟುಹಬ್ಬ ಬರೀ ಸಂಭ್ರಮಕ್ಕೆ ಸೀಮಿತವಾಯಿತು. ಅದರಿಂದ ಕನ್ನಡ ಚಿತ್ರರಂಗಕ್ಕೆ ಆದ ಲಾಭ ಏನು? ಎಂಬ ರಘು ಅವರ ಅಭಿಪ್ರಾಯಕ್ಕೆ ನಮ್ಮ ಸಹಮತವಿದೆ.

-ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ

## ಪಾಂಚಾಲಿಗೆ ಕನ್ಯೆಯ ಪಟ್ಟ!

ಮಹಾಭಾರತದ ದ್ರೌಪದಿಯ ಮನಸ್ಸಿನ ಬೇಗುದಿಯನ್ನು 'ಪಾಂಚಾಲಿ' ಕಥೆಯಲ್ಲಿ ಶಿವಮೂರ್ತಿ ನಂದನಹೊಸೂರು ರಸವತ್ತಾಗಿ ಚಿತ್ರಿಸಿದ್ದಾರೆ. (ಸುಧಾ, ಜೂನ್7) ನಮ್ಮ ಪೂರ್ವಜರು ದ್ರೌಪದಿಯ ಹಣೆಗೆ ಕನ್ಯೆ ಎಂಬ ಪಟ್ಟಿಯನ್ನು ಕಟ್ಟಿ ಬೇರೆ ನಾಲ್ವರೊಂದಿಗೆ ಸ್ತುತಿಸಿರುವುದು ವಿಡಂಬನೆ ಅಲ್ಲವೆ!

'ಅಹಲ್ಯ– ದ್ರೌಪದಿ– ಸೀತಾ– ತಾರಾ– ಮಂಡೋದರಿ ತತಃ
ಪಂಚಕನ್ಯೇ ಸ್ಮರೇನಿತ್ಯಂ ಮಹಾಪಾತಕ ನಾಶನಮ್॥'

-ಕೆ.ಸಾಂಬಶಾಸ್ತ್ರಿ, ಹೊಸಪೇಟೆ/ ಎನ್.ವಿ.ಕಮಲಮ್ಮ, ಬೆಂಗಳೂರು

## ಜಗಳ ಹಚ್ಚುವ 'ಸುಧಾ!'

ಮಡಿವಾಳ ಹಕ್ಕಿಯ ಚಿತ್ರ, ಡಾ.ಲೀಲಾವತಿ ದೇವದಾಸ್ ಅವರ ಬರಹ ಸೇರಿದಂತೆ 'ಸುಧಾ'ದಲ್ಲಿ ಇಷ್ಟವಾಗುವ ಸಂಗತಿಗಳು ಹಲವು. ಪ್ರತಿ ಗುರುವಾರ 'ಸುಧಾ' ಬರುತ್ತಿದ್ದಂತೆಯೇ ಮನೆಯವರೆಲ್ಲ ಕಿತ್ತಾಡುತ್ತಿದ್ದೆವು. ಈಗ ಮಕ್ಕಳಿಬ್ಬರು ಬೆಂಗಳೂರು ಸೇರಿದ್ದು, ಈಗ ನಾವು ಗಂಡ ಹೆಂಡತಿ 'ಸುಧಾ'ನಾನು ಮೊದಲು ನೋಡಬೇಕು ಎಂದು ಕಿತ್ತಾಡುತ್ತಿರುತ್ತೇವೆ.

-ದಾಕ್ಷಾಯಿಣಿ, ಶಿವಮೊಗ್ಗ



